# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಡಗು–ಮಡಿಕೇರಿ

**ಅಧಿಸೂಚನೆ ಸಂಖ್ಯೆ: 08/2024, ದಿನಾಂಕ: 25.09.2024**

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಡಗು–ಮಡಿಕೇರಿಯ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಕಚೇರಿ ಸಹಾಯಕ/ಗುಮಾಸ್ತ ಹಾಗೂ ದಲಾಯತ್ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಅವಧಿಗೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿರುವ ಕುರಿತು.

ಓದಲಾಗಿದೆ: 1.ಗೌರವಾನ್ವಿತ ಕರ್ನಾಟಕ ರಾಜ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ: ಕರಾಕಾಸೇಪ್ರಾ: 31/LADCS–Human Resources–2024–1384/24 ದಿ:20.09.2024.

2. NALSA– Legal Aid defense Counsel Modified Scheme – 2022

*****

## ಪ್ರಸ್ತಾವನೆ:

ಗೌರವಾನ್ವಿತ ಕರ್ನಾಟಕ ರಾಜ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ: ಕರಾಕಾಸೇಪ್ರಾ: 31/LADCS–Human Resources–2024–1384/24 ದಿ:20.09.2024 ನಿರ್ದೇಶನದನ್ವಯ, ಕೊಡಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿರುವ, ಕಾನೂನು ನೆರವು ಅಭಿರಕ್ಷಣಾ ಕಛೇರಿಯಲ್ಲಿ, **ತಾತ್ಕಾಲಿಕವಾಗಿ 6 ತಿಂಗಳ ಅವಧಿಗೆ** ಕಚೇರಿ ಸಹಾಯಕ ಮತ್ತು ದಲಾಯತ್(ಅಟೆಂಡರ್) ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 01 | ಕಛೇರಿ ಸಹಾಯ/ ಗುಮಾಸ್ತ | 02 |

....2

## ವಿದ್ಯಾರ್ಹತೆಃ

ಅ) ಯಾವುದೇ ಪದವಿಯನ್ನು ಹೊಂದಿರಬೇಕು

ಆ) ಕಂಪ್ಯೂಟರ್ ಜ್ಞಾನ ಹೊಂದಿರಬೇಕು

ಇ) ಕಂಪ್ಯೂಟರ್ ನಲ್ಲಿ ಡೇಟಾವನ್ನು ಫೀಡ್ ಮಾಡಲು ಬರಬೇಕು

ಈ) ಕನ್ನಡ ಮತ್ತು ಇಂಗ್ಲೀಷನಲ್ಲಿ ಡಿಕ್ಟೇಶನ್ ತೆಗೆದುಕೊಂಡು ಟೈಪ್ ಮಾಡವ ಸಾಮರ್ಥ್ಯ ಹೊಂದಿರಬೇಕು

ಉ) ಫೈಲ್ ನಿರ್ವಹಣೆ ಮತ್ತು ಸಂಸ್ಕರಣೆಯ ಜ್ಞಾನ ಹೊಂದಿರಬೇಕು

| ಕ್ರ.ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 02 | ದಲಾಯತ್ | 02 |

## ವಿದ್ಯಾರ್ಹತೆಃ

ಅ) ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾಗಿರಬೇಕು

## * ಅರ್ಜಿ ಸಲ್ಲಿಕೆಯ ದಿನಾಂಕಃ

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕಃ 26.09.2024

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಃ 03.10.2024

## * ಅರ್ಜಿ ಸಲ್ಲಿಸುವ ವಿಧಾನಃ

ಅರ್ಹ ಅಭ್ಯರ್ಥಿಗಳು ಈ ಅಧಿಸೂಚನೆಯೊಂದಿಗೆ ನೀಡಿರುವ ನಮೂನೆಯಲ್ಲಿ ತಮ್ಮ ಸಂಪೂರ್ಣ ಮಾಹಿತಿಯನ್ನು ಸೂಕ್ತ ದಾಖಲೆಗಳೊಂದಿಗೆ ಹಾಗೂ ಪಾಸ್‌ಪೋರ್ಟ್ ಅಳತೆ 2 ಇತ್ತಿಚ್ಚಿನ ಭಾವಚಿತ್ರಗಳೊಂದಿಗೆ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಲಯಗಳ ಆವರಣ, ಕೊಡಗು-ಮಡಿಕೇರಿ ಇಲ್ಲಿಗೆ ಕೊನೆಯ ದಿನಾಂಕದೊಳಗಾಗಿ ಅಂದರೆ ದಿನಾಂಕಃ 03.10.2024 ರೊಳಗಾಗಿ ಸಲ್ಲಿಸತಕ್ಕದ್ದು ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

....3

## * ನೇಮಕಾತಿ ವಿಧಾನಃ

ಸಂದರ್ಶನ , ಕೌಶಲ್ಯ, ಕಂಪ್ಯೂಟರ್ ಮತ್ತು ಬೆರಳಚ್ಚು ನಿಖರತೆ ಮತ್ತು ನೈಪುಣ್ಯತೆ ಅಧಾರಿಸಿ ನೇರ ನೇಮಕಾತಿ.

## * ಷರತ್ತುಗಳುಃ

* ಸದರಿ ಹುದ್ದೆಗೆ ಅಭ್ಯರ್ಥಿಗಳನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ 6 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗುವುದು.

* ಸದರಿ ಹುದ್ದೆಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ನೇಮಕಗೊಂಡ ಅಭ್ಯರ್ಥಿಯು ಸದರಿ ಹುದ್ದೆಯಲ್ಲಿ ಅವರನ್ನು ಖಾಯಂಗೊಳಿಸುವ ಯಾವುದೇ ಹಕ್ಕನ್ನು ಪ್ರತಿಪಾದಿಸಲು ಅವಕಾಶವಿರುವುದಿಲ್ಲ.

* ಸದರಿ ಹುದ್ದೆಗೆ ನಿಗದಿಗೊಳಿಸಿರುವ ಮಾಸಿಕ ಸಂಭಾವನೆಯು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿರ್ದೇಶಿಸಲ್ಪಟ್ಟಿದ್ದು, ಈ ಕುರಿತು ಸರ್ಕಾರದಿಂದ ಅಥವಾ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಮುಂದೆ ಹೊರಡಿಸಬಹುದಾದ ಮಾರ್ಗಸೂಚಿಗಳಿಗೆ ಅನುಸಾರ ಬದಲಾವಣೆಗೆ ಒಳಪಡುವಂತಹ ನಿಬಂದನೆಗಳಿಗೆ ಒಳಪಟ್ಟಿರುತ್ತದೆ.

* ನೇಮಕಗೊಂಡ ಅಭ್ಯರ್ಥಿಯು ಅಗತ್ಯಬಿದ್ದರೆ ಸಾರ್ವತ್ರಿಕ ರಜಾ ದಿನಗಳಲ್ಲೂ ಸಹ ಕಚೇರಿ ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

* ನೇಮಕಗೊಂಡ ಅಭ್ಯರ್ಥಿಗಳು ತಮ್ಮ ಕರ್ತವ್ಯದಲ್ಲಿ ಸದಾ ಶಿಸ್ತುಬದ್ಧರಾಗಿರತಕ್ಕದ್ದು ಹಾಗೂ ಯಾವುದೇ ದುರ್ನಡತೆ, ಅಶಿಸ್ತು ತೋರಿದರೆ ಅಥವಾ ಹಣಕಾಸು ದುರುಪಯೋಗ ಮಾಡಿರುವುದು, ಕಂಡುಬಂದಲ್ಲಿ ನಿಯಮಾನುಸಾರ ಶಿಕ್ಷೆಗೆ ಮತ್ತು ದಂಡನೆಗೆ ಗುರಿಪಡಿಸಲಾಗುವುದು.

* ಯಾವುದೇ ಕಾರಣಗಳಿಂದ ಅಭ್ಯರ್ಥಿಗಳು ತಮ್ಮ ಹುದ್ದೆಯನ್ನು ತ್ಯಜಿಸಲು ಇಚ್ಚಿಸಿದರೆ ಆ ಕುರಿತು ಒಂದು ತಿಂಗಳ ಮುಂಚಿತವಾಗಿ ಪ್ರಾಧಿಕಾರಕ್ಕೆ ಮಾಹಿತಿ ನೀಡತಕ್ಕದ್ದು.

* ನೇಮಕಗೊಂಡ ಅಭ್ಯರ್ಥಿಗಳು ಸರ್ಕಾರ ವಿಧಿಸಿರುವ ನೀತಿ ನಿಯಮಗಳಿಗೆ ಬದ್ಧರಾಗಿತರಕ್ಕದ್ದು ಹಾಗೂ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸತಕ್ಕದ್ದು.

....4

* ವಿಶೇಷ ಸೂಚನೆಃ ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನದ ದಿನಾಂಕವನ್ನು ದೂರವಾಣಿ ಮುಖಾಂತರ ತಿಳಿಸಲಾಗುವುದು ಮತ್ತು ಸಂದರ್ಶನ ಪತ್ರವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಡಗು–ಮಡಿಕೇರಿ, ಕಚೇರಿಗೆ ಖುದ್ದಾಗಿ ಬಂದು ತೆಗೆದುಕೊಳ್ಳತಕ್ಕದ್ದು.

ಗೌ|| ಅಧ್ಯಕ್ಷರು ಜಿ.ಕಾ.ಸೇ.ಪ್ರಾ., ಕೊಡಗು-ಮಡಿಕೇರಿ
ಇವರ ಆದೇಶದ ಮೇರೆಗೆ.

ಸ್ಥಳಃ ಮಡಿಕೇರಿ.
ದಿನಾಂಕಃ 25.09.2024

(ಶುಭ)
ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು-ಮಡಿಕೇರಿ.